# ವಾರ್ಡ್ ಸಭೆ ಸಂಖ್ಯೆ.41

ದಿನಾಂಕ:03.09.2022 ರಂದು ಸಮಯ 11:30 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಕಾರ್ಯದರ್ಶಿಗಳು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ ಎಲ್. ವೆಂಕಟೇಶ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. **(ಅಧ್ಯಕ್ಷರು)**
2. ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. **(ಕಾರ್ಯದರ್ಶಿ)**
2. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
3. ಡಾ॥ ಶ್ರೀ ಶಶಿಕುಮಾರ್ ಎಸ್.ಆರ್ ಆರೋಗ್ಯ ವೈಧ್ಯಾಧಿಕಾರಿಗಳು ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ.
4. ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
5. ಶ್ರೀ ಯೋಗೇಂದ್ರ.ಎಂ.ಅರ್ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
6. ಶ್ರೀ ಜಿ.ಕೆ ವೆಂಕಟೇಶಯ್ಯ, ಕೆಲಸ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
7. ಶ್ರೀ ಶ್ರೀ ಮಂಜುನಾಥ್ ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
8. ಶ್ರೀ ಶ್ರೀ ಮಹದೇವ ಗುತ್ತಿಗೆದಾರರು ಬೀದಿ ದೀಪ ಬಿ.ಬಿ.ಎಂ.ಪಿ
9. ಶ್ರೀ ಜಯಪಾಲ್ ಸದಸ್ಯರು
10. ಶ್ರೀ ರಾಜೇಶ್. ಸದಸ್ಯರು.
11. ಶ್ರೀ ವೈ.ಆರ್. ವೆಂಕಟೇಶ್ ಸದಸ್ಯರು,
12. ಶ್ರೀ ಗೋಪಿ ಸದಸ್ಯರು,
13. ಶ್ರೀ ನಂಜೇಗೌಡರು ಸದಸ್ಯರು
14. ಶ್ರೀ ದಿನೇಶ್ ಕುಮಾರ್ ಸ.ಅ. (ಬೇಸ್ಕಾಂ)
15. ಆರ್.ಎಂ.ಸಿ.ಯಾರ್ಡ್ ಪೋಲೀಸ್ ಠಾಣಾ ಸಿಬ್ಬಂಧ್ಧಿ.
16. ಶ್ರೀ ಶಿವಣ್ಣ ಪಿ.ಎಸ್.ಐ. ರಾಜಾಜಿನಗರ ಸಂಚಾರಿ ಪೋಲೀಸ್ ಠಾಣೆ.
17. ಶ್ರೀ ಸುನಿತ.ವೈ.ಕೆ. ಕಿ.ಅ. ಕೊಳವೆ ಬಾವಿ ವಿಭಾಗ (ಬಿ.ಡಬ್ಲ್ಯೂ.ಎಸ್.ಎಸ್.ಬಿ)
18. ಶ್ರೀ ಸುನಿಲ್ ಮಾರ್ಷಲ್

ಕಾರ್ಯದರ್ಶಿರವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು.

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 01 | ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 02 | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 03 | ವಿಜಯಾನಂದನಗರದ ಸ್ಯಾನಿಟರಿ ಸಮಸ್ಯೆ ಈವರೆಗೂ ಪರಿಹಾರ ದೊರಕಿರುವುದಿಲ್ಲ ಆದ್ದರಿಂದ ಸಂಬಂದಪಟ್ಟವರಿಗೆ ಪತ್ರ ಬರೆಯಲು ಕೋರಿದರು. ಇದಕ್ಕೆ ಅಧ್ಯಕ್ಷರು ಸಂಬಂಧಪಟ್ಟವರಿಗೆ ಪತ್ರ ಬರೆಯಲಾಗುವುದು ಎಂದು ತಿಳಿಸಿದರು. | ಬಿ.ಡಬ್ಲ್ಯೂ.ಎಸ್. ಎಸ್.ಬಿ ಇಲಾಖೆ |
| 04 | ಸದಸ್ಯರು ವಾರ್ಡ್ ವ್ಯಾಪ್ತಿಯಲ್ಲಿ ಐಮಾಸ್ಟ್ ಗಳ ಸಮಸ್ಯಗಳ ಬಗ್ಗೆ ತಿಳಿಸಿದರು, ಈ ಐಮಾಸ್ಟ್ ಲೈಟ್‌ಗಳ ಸಮಸ್ಯೆಗಳ ಬಗೆ ಗುತ್ತಿದಾರರು 14 ಐಮಾಸ್ಟ್ ಲೈಟ್‌ಗಳು ರಿಪೇರಿಯಾಗಿದ್ದು 2 ಐಮಾಸ್ಟ್ ಲೈಟ್ ಕಂಬಗಳು ಮಾತ್ರ ಬಾಕಿ ಉಳಿದಿವೆ ಇವುಗಳನ್ನು ಮುಂದಿನ ಸಭೆಯೊಳಗೆ ರಿಪೇರಿ ಮಾಡಿಕೊಡುತ್ತೇನೆಂದು ತಿಳಿಸಿದರು , ಮಾಹಿತಿಯನ್ನು ಮುಂದಿನ ಸಭೆಗೆ ತಿಳಿಸಲಾಗುವುದು. | ಬೀದಿ ದೀಪ ಇಲಾಖೆ |
| 05 | ಕಾರ್ಯದರ್ಶಿಗಳು ಕೋವಿಡ್‌ಗೆ ಸಂಬಂಧಿಸಿದ ಮಾಹಿತಿ ಕೋರಿದರು ಇದಕ್ಕೆ ಡಾ॥ ಶ್ರೀ ಶಶಿಕುಮಾರ್ ರವರು ಸಭೆಗೆ ಸಭೆಗೆ ಸಮಗ್ರ ಮಾಹಿತಿಯನ್ನು ನೀಡಿದರು. | ಆರೋಗ್ಯ ವೈಧ್ಯಾಧಿಕಾರಿಗಳು |
| 06 | | |
| 07 | ಶ್ರೀ ಜಯಪಾಲ್ ಸದಸ್ಯರು ರವರು ಗೌತಮನಗರದಲ್ಲಿ ಕಂಬ ಮನೆಯಮೇಲೆ ಬಾಗಿರುತ್ತದೆ ಅದನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂದಪಟ್ಟವರಿಗೆ ಅಧಿಕಾರಿಗಳನ್ನು ಸ್ಥಳ ಪರಿಶೀಲನೆಗೆ ಕಳುಹಿಸಿ ಸದರಿ ಕಂಬ ತೆರವುಗೊಳಿಸಲು ಸೂಚಿಸಿ ಇದರ ಬಗ್ಗೆ ಸಭೆಗೆ ತಿಳಿಸಿದರು. | ಬೀದಿ ದೀಪದ ಅಧಿಕಾರಿಗಳಿಗೆ |
| 08 | ಶಂಕರನಗರ ಮುಖ್ಯರಸ್ತೆಯ ಸಾಯಿ ಸಂಘರ್ಷ ಆಯಿಲ್ ಮಿಲ್ ಹತ್ತಿರ ಮ್ಯಾನ್ ಹೋಲ್ ರಿಪೇರಿ ಮಾಡಲು ಬಿ.ಡ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳಿಗೆ ಸೂಚಿಲು ಡಾ॥ ನಾಗೇಂದ್ರರವರು ಕೋರಿದರು, | ಬಿ.ಡ್ಲ್ಯೂ.ಎಸ್.ಎಸ್. ಬಿ. ಅಧಿಕಾರಿಗ |

| | | |
|---|---|---|
| 10 | ಬಿ.ಎಲ್.ಓ ಗಳನ್ನು ಸಭೆಗೆ ಕಂದಾಯ ಅಧಿಕಾರಿಯೊಂದಿಗೆ ಕರೆದು ಸದರಿಯವರುಗಳ ಕಾರ್ಯವ್ಯಾಪ್ತಿಯ ಬಗ್ಗೆ ವಾರ್ಡ್ ಕಮಿಟಿಗೆ ತಿಳಿಸಲು ಡಾ॥ ನಾಗೇಂದ್ರರವರು ಕೋರಿದ್ದಾರೆ. | ಕಂದಾಯ ಅಧಿಕಾರಿಗಳು |
| 11 | ಬಿ.ಡ್ಲ್ಯೂಎಸ್.ಎಸ್.ಬಿ. ಅಧಿಕಾರಿಗಳು ಸಭೆಗೆ ಹಾಜರಾಗದಿರುವುದರಿಂದ ನೋಟೀಸ್ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತ್ತು. | ಕಾರ್ಯದರ್ಶಿಗಳು |
| 12 | ವಿಜಯಾನಂದನಗರ ಮುಖ್ಯರಸ್ತೆಯಲ್ಲಿರುವ ಆಂಜನೆಯಸ್ವಾಮಿ ದೇವಸ್ಥಾನದ ಬಳಿ ಇರುವ ಮನೆಗೆ ನೀರಿನ ಬಿಲ್ಲು ಹೆಚ್ಚಾಗಿ ಬಂದಿರುವುದರಿಂದ ಕಾರಣವೇನು ಎಂಬುದಕ್ಕೆ ಮಾಹಿತಿ ನೀಡಲು ಡಾ॥ ನಾಗೇಂದ್ರ ಕೋರಿದರು | ಬಿ.ಡ್ಲ್ಯೂಎಸ್.ಎಸ್. ಬಿ. ಅಧಿಕಾರಿಗಳು |
| 14 | ಕಣ್ವ ಆಸ್ಪಿಟಲ್ ರಸ್ತೆಯಲ್ಲಿ ವಾಹನಗಳನ್ನು ರಸ್ತೆಯ ಬದಿಯಲ್ಲಿಯೆ ನಿಲ್ಲಿಸಿರುವುವುದನ್ನು ತೆರವುಗೊಳಿಲು ಸಭೆಗೆ ಡಾ॥ನಾಗೇಂದ್ರರವರು ಕೋರಿದರು ಅದಕ್ಕೆ ಸಂಬಧಪಟ್ಟ ಪೊಲೀಸ್ ಅಧಿಕಾರಿಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ಮಹಿತಿ ನೀಡಲಾಗುವುದು ಎಂದು ತಿಳಸಿದರು | ಟ್ರಾಫಿಕ್ ಪೊಲೀಸ್ ರಾಜಾಜಿನಗರ |
| 15 | ಮನೆ.ನಂ.7, 1ನೇ ಮುಖ್ಯರಸ್ತೆ, ಸೋಮೇಶ್ವರನಗರದಲ್ಲಿ ಸಾನಿಟರಿ ಲೀಕೇಜ್ ಹಾಗಿರುವುದರಿಂದ ಅದನ್ನು ದುರಸ್ಥಿಪಡಿಸಲು ಸಂಬಂಧಪಟ್ಟವರಿಗೆ ಪತ್ರ ಬರೆಯಲಾಗುವುದು ಎಂದು ಸಭೆಯಲ್ಲಿ ತಿಳಿಸಲಾಯಿತು. | ಬಿ.ಡಬ್ಲ್ಯೂಎಸ್. ಎಸ್.ಬಿ ಇಲಾಖೆ |
| 16 | ಗೌತಮನಗದಲ್ಲಿ ಐಮಾಸ್ಟ್ ಲೈಟ್ ಅನ್ನು ದುರಸ್ತಿಗೊಳಸಿಲು ಶ್ರೀ ಜಯಪಾಲ ರವರು ಕೋರಿದರು | ಬೀದಿ ದೀಪದ ಅಧಿಕಾರಿಗಳಿಗೆ |
| 17 | ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಸಿಗನಲ್ ಅಳವಡಿಸಲು ಶ್ರೀ ಸ್ವಾತಿ ಎಂಬುವರು ಸಭೆಗೆ ಮನವಿ ಮಾಡಿಕೊಂಡಿರುತ್ತಾರೆ. | ಟ್ರಾಫಿಕ್ ಪೊಲೀಸ್ ರಾಜಾಜಿನಗರ |
| 18 | ಶಂಕರನಗರದಲ್ಲಿ 12 ದಿನಗಳಿಂದ ಕುಡಿಯುವ ನೀರು ಬರುತ್ತಿರುವುದಿಲ್ಲ ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ತುರ್ತಾಗಿ ಕ್ರಮಕೈಗೊಳ್ಳಬೇಕೆಂದು ಶ್ರೀ ರಾಜೇಶ್ ಸಭೆಗೆ ಕೋರಿರುತ್ತಾತೆ | ಬಿ.ಡಬ್ಲ್ಯೂಎಸ್. ಎಸ್.ಬಿ ಇಲಾಖೆ |
| 19 | ಗೌತಮನಗರದ ಬೆಳವಾಡಿ ಪ್ಯಾಕ್ಟ್ರಿ ಬಳಿ ಮ್ಯಾನ್ ಹೋಲ್ ದುರಸ್ತಿ ಮಾಡಲು ಶ್ರೀ ಜಯಪಾಲ್ ರವರು ಕೋರಿರುತ್ತಾರೆ. | ಬಿ.ಡಬ್ಲ್ಯೂಎಸ್. ಎಸ್.ಬಿ ಇಲಾಖೆ |
| 20 | ವಾರ್ಡ್ ವ್ಯಾಪ್ತಿಯಲ್ಲಿ ಕಂಬಳಿ ಹುಳಗಳು ಹೆಚ್ಚಾಗಿರುವುದರಿಂದ ಔಷದಿ ಸಿಂಪಡಣೆ ಮಾಡಬೇಕೆಂದು ಕೊರಿರುತ್ತಾರೆ. ಶ್ರೀ ಎಂ.ಮಹದೇವ ನಿಕಟ ಪೂರ್ವ ಬಿ.ಬಿ.ಎಂ.ಪಿ.ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು |
| 21 | ಕೃಷ್ಣಾನಂದನಗರದಲ್ಲಿ ಬೀದಿದೀಪ ಅಳವಡಿಸಲು ಶ್ರೀ ಬಿ.ಆರ್. ಪುಟ್ಟಸ್ವಾಮಿರವರು ಕೋರಿರುತ್ತಾರೆ. | ಬೀದಿ ದೀಪದ ಅಧಿಕಾರಿಗಳಿಗೆ |
| 22 | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | – |

**ಕಾರ್ಯದರ್ಶಿ**

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44
ಮಾರಪ್ಪನಪಾಳ್ಯ